**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು**

**ದಿ:25-10-2024**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಲ್ ಎನ್ ವಕೀಲರಿಂದ**

ಈ ದಾವೆಯಲ್ಲಿ ಚೆಕ್ಕುಬಂದಿ ಪೂಃ ಸ ನಂ 136/2 ರ ಉಳಿಕೆ ಜಮೀನು ಪಃ ಸ ನಂ 136/2 ರ ಉಳಿಕೆ ಜಮೀನು , ಉಃ ದೇವಲಕೆರೆ ನೀಕನಹಳ್ಳಿ ರಸ್ತೆ, ದಃ ಸ ನಂ 136/2 ಉಳಿಕೆ ಜಮೀನು ಇರುತ್ತದೆ ಎಂದು ನಮೂದಿಸಿರುತ್ತದೆ. ಸಾಕ್ಷಿಗೆ ಈಗ ದಾವಾ ಷೆಡ್ಯೂಲ್ ಸ್ವತ್ತನ್ನು ಓದಿ ತಿಳಿಸಲಾಗಿ ಕರಾರುಪತ್ರದಂತೆ ಚಕ್ಕುಬಂದಿ ನೀಡಿದ್ದು ತಪ್ಪಾಗಿ ನಮೂದಿಸಿರುತ್ತೇವೆ ಎಂದು ನುಡಿಯುತ್ತಾರೆ. ನಮ್ಮ ತಂದೆ ದಿಃ 07-01-2020 ರಂದು ಮರಣ ಹೊಂದಿರುತ್ತಾರೆ. ನಿಪಿ-1 ಕರಾರು ದಿಃ 08-06-2018 ರಲ್ಲಿ ಆಗಿರುತ್ತದೆ. ಕರಾರುಪತ್ರ ಆದ ಒಂದೂವರೆ ವರ್ಷದ ನಂತರ ನನ್ನ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಿಪಿ-1 ರ ಪ್ರಕಾರ ಮೂರು ತಿಂಗಳಲ್ಲಿ ಪೋಡು ಮಾಡಿಸಿಕೊಂಡು ಕ್ರಯಪತ್ರ ಮಾಡಿಕೊಳ್ಳಬೇಕಾಗಿತ್ತು ಎಂದರೆ ಸರಿ. ನಮ್ಮ ತಂದೆ ಪೋಡಿಗಾಗಿ ಅರ್ಜಿ ನೀಡಿದ್ದರು. ಸದರಿ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಮ್ಮ ತಂದೆ ಜೀವಿತ ಕಾಲದಲ್ಲಿ ನೋಟೀಸ್ ನೀಡಿರುವುದಿಲ್ಲ ಆದರೆ ಮೌಖಿಕವಾಗಿ ತಿಳಿಸಿರುತ್ತಾರೆ.

ದಿಃ 28-08-2020 ರಲ್ಲಿ ನಾನು ವಕೀಲರ ಮೂಲಕ ಪ್ರತಿವಾದಿಯವರಿಗೆ ನೋಟೀಸ್ ನೀಡಿರುತ್ತೇನೆ ಎಂದರೆ ಸರಿ. ನಿಪಿ-2 ರಲ್ಲಿ ಪ್ರತಿವಾದಿಯೇ ಪೋಡಿ ಮಾಡಿಸಿ ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದರು ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ನಿಪಿ-2 ನೋಟೀಸ್ ನಲ್ಲಿ ಬಾಕಿ ಹಣ ಕೊಡಲು ತಯಾರಿರುತ್ತೇನೆ ಎಂದು ಬರೆಸಿರುತ್ತೇನೆ. ನಿಪಿ-2 ಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ-1 ಕರಾರುಪತ್ರದಲ್ಲಿ ಪ್ರತಿವಾದಿ ಪೋಡು ಮಾಡಿಸಿಕೊಡುತ್ತೇನೆ ಎಂದು ಒಪ್ಪಿಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ-1 ರ 3 ನೇ ಪುಟದಲ್ಲಿ ಅಂಶವನ್ನು ಸೇರಿಸುವ ಬಗ್ಗೆ ಷರಾ ಬರೆದಿರುವುದಿಲ್ಲ ಎಂದರೆ ಸರಿ. 2ನೇ ಪುಟದಲ್ಲಿ ಚೆಕ್ಕು ನಂಬರ್ ಸೇರಿಸಿರುವ ಬಗ್ಗೆಯೂ ಷರಾ ಬರೆದಿರುವುದಿಲ್ಲ ಎಂದರೆ ಚೆಕ್ಕು ನಂಬರ್ ಅನ್ನು ಕರಾರುಪತ್ರ ದಸ್ತೂರರೇ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ದಸ್ತೂರರು ಕರಾರುಪತ್ರ ಆದ ದಿನ ನಮ್ಮ ಊರಿಗೆ ಬಂದಿರುವುದಿಲ್ಲ ಎಂದರೆ ಸರಿ.

ನಾನು ಪ್ರತಿವಾದಿರವರ ವಿರುದ್ಧ ಅದಾ ನಂಃ 138/23 ದಾವೆಯನ್ನು ಶಾಶ್ವತ ನಿಷೇದಾಜ್ಞೆಗಾಗಿ ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆ 03 ಗುಂಟೆಗೆ ಸಂಬಂಧಪಟ್ಟಂತೆ

ಹಾಕಿರುತ್ತೇನೆ. ಸದರಿ ಜಮೀನು ನಮ್ಮ ತಂದೆಗೆ ಕೋರ್ಟ್ ಮುಖಾಂತರ ಬಂದಿರುತ್ತದೆ. ಸದರಿ ದಾವೆಯಲ್ಲಿ ನ್ಯಾಯಾಲಯದ ಮೂಲಕ ಕಮೀಷನರ್ ಬಂದು ಸದರಿ ಆಸ್ತಿಯನ್ನು ಗುರುತಿಸಿಕೊಟ್ಟಿರುತ್ತಾರೆ ಎಂದು ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸ ನಂ 136/2 ಸಂಪೂರ್ಣ ಜಮೀನನ್ನು ಅಳತೆ ಮಾಡಿಸಿ ನಮ್ಮ ಜಮೀನನ್ನು ಗುರುತಿಸಿಕೊಟ್ಟಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ದಾವಾ ಅಸ್ತಿ ಬರೆದುಕೊಡಬೇಕು ಇಲ್ಲವೇ ಮುಂಗಡ ಹಣ ವಾಪಸ್ಸು ಕೊಡಬೇಕೆಂದು ದಾವೆ ಹೂಡಿರುತ್ತೇನೆ.

ಪ್ರತಿವಾದಿಯ ತಂದೆ ನಿಂಗೇಗೌಡರಿಗೆ ಸ ನಂ 136/2 ರಲ್ಲಿ 05 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಪ್ರಕಾರ ಯಾವುದೇ ಷರತ್ತುಗಳನ್ನು ಪಾಲಿಸದೇ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಣ ವಾಪಸ್ಸು ಕೇಳಲು ಸಹ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಕಾನೂನು ರೀತಿಯ ಯಾವುದೇ ಮಾನ್ಯತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ತಯಾರಿಸಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ